

## ನಕ್ಕುಬಿಡಿ



ವಿದ್ಯಾರ್ಥಿ: ಸಾರ್ ಅಲ್ಲಿ ನೋಡಿ ರಾಮು ತಲೆ ಮೇಲೆ ಇರುವೆ ಹತ್ತುತ್ತಾ ಇದೆ.

ಶಿಕ್ಷಕ: ಅದನ್ನು ರಾಮು ಬಳಿ ಹೇಳದೆ ನನ್ನ ಬಳಿ ಏಕೆ ಹೇಳುವೆ?

ವಿದ್ಯಾರ್ಥಿ: ರಾಮು ತಲೆಗೆ ಏನೂ ಹತ್ತೋದಿಲ್ಲ ಅಂತ ನೀವು ನಿನ್ನೆ ತಾನೆ ಹೇಳಿದ್ರಲ್ಲ ಸಾರ್ ಅದಕ್ಕೇ ನಿಮ್ಗೆ ಹೇಳ್ತಾ ಇದೀನಿ.

★★★

ಹೆಂಡತಿ: ನನ್ನ ಜತೆ ಬಾಳೋದಕ್ಕಿಂತ ಸಮುದ್ರದಲ್ಲಿ ಬಿದ್ದು ಸಾಯೋದೇ ವಾಸಿ ಅಂತ ಹೋದ್ರಿ. ಏಕೆ ವಾಪಸ್ ಬಂದ್ರಿ?

ಗಂಡ: ಸಾಯೋಣ ಅಂತಾನೇ ಸಮುದ್ರದ ಕಡೆ ಹೋದೆ. ಅಲ್ಲಿ ಪಕ್ಕದ ಮನೆಯವರು ಕುಟುಂಬ ಸಮೇತ ಬಂದಿದ್ದರು. ಅದಕ್ಕೇ ಬಂದುಬಿಟ್ಟೆ

ಹೆಂಡತಿ: ಅವರಿದ್ದರೆ ನಿಮಗೇನು ಕಷ್ಟ?

ಗಂಡ: ಅವರೆಲ್ಲ ಕುಟುಂಬ ಸಮೇತ ಆತ್ಮಹತ್ಯೆ ಮಾಡಿಕೊಳ್ಳಲು ಬಂದಿದ್ರು ಹಾಗಿರುವಾಗ ನಾನು ಮಾತ್ರ ಏಕೆ ಒಬ್ಬನೇ ಸಾಯಲಿ? ನಿನ್ನನ್ನೂ ಕರೆದುಕೊಂಡು ಹೋಗೋಣ ಎಂದು ಬಂದೆ.

★★★

ಗಂಡ: ಲೇ ಕಾಮಾಕ್ಷಿ ಪುಸ್ತಕ ನೋಡಿ ಅಡುಗೆ ಮಾಡಬೇಡ ಅಂತ ನಿನಗೆ ಎಷ್ಟು ಸಲ ಹೇಳೋದು? ಈಗ ನೋಡು ಸಾಂಬಾರ್‌ನಲ್ಲಿ ಉಪ್ಪು ಖಾರ ಏನೂ ಇಲ್ಲ ಕಣೇ.

ಹೆಂಡತಿ: ನಾನು ನಿಮಗೆ ಎಷ್ಟು ಸಲ ಹೇಳೋದು ಊಟ ಮಾಡುವಾಗ ಪತ್ರಿಕೆ ಓದಬೇಡಿ ಅಂತ! ಸಾಂಬಾರ್‌ನ ಬದಲು ನೀರನ್ನು ಅನ್ನಕ್ಕೆ ಸುರಿದುಕೊಂಡಿದ್ದೀರ, ಅಂದ ಮೇಲೆ ಉಪ್ಪು ಖಾರ ಎಲ್ಲಿಂದ ಬರುತ್ತದೆ ಹೇಳಿ.

★★★

ಕಮಲ: (ಸಿಟ್ಟಿನಿಂದ) ನಿಮ್ಮ ಯಜಮಾನ್ರಿಗೆ ಸ್ವಲ್ಪಾನೂ ತಲೇನೇ ಇಲ್ಲ ಗಿರಿಜಾ...

ಗಿರಿಜಾ: ಓ ಅದು ನಿಮಗೆ ಈವತ್ತು ಗೊತ್ತಾಯಿತಾ? ನನಗೆ 15 ವರ್ಷಗಳ ಮುಂಚೆಯೇ ಗೊತ್ತಾಯ್ತು ಕಮಲಮ್ಮಾ.

**(ಸಂಗ್ರಹ) ಸಾವಿತ್ರಮ್ಮ ಕೆ. ವಿಭೂತಿ, ಹರಿಹರ**

ವಿಜ್ಞಾನಿಯೋರ್ವರು ಮೆಡಿಕಲ್ ಸ್ಟೋರ್‌ಗೆ ಹೋಗಿ ಫಾರ್ಮಾಸಿಸ್ಟ್ ಬಳಿ ಕೇಳಿದರು, 'ನನಗೆ ಅಸಿಟಿಸಿಲ್ಯಾಲಿಸಿಲಿಕ್ ಆಸಿಡ್‌ನಿಂದ ತಯಾರಿಸಿದ ಮಾತ್ರೆಗಳು ಬೇಕು.

ಫಾರ್ಮಾಸಿಸ್ಟ್: ನೀವು ಆಸ್ಪಿರಿನ್ ಕೇಳುತ್ತಿದ್ದೀರಿ ತಾನೆ?

ವಿಜ್ಞಾನಿ (ತನ್ನ ಹಣೆಚಚ್ಚಿ ಕೊಳ್ಳುತ್ತಾ): ಹ್ಞಾಂ ಅದೇ... ಅದರ ಹೆಸರು ನೆನಪಲ್ಲಿಟ್ಟುಕೊಳ್ಳಲು ನನಗೆ ಯಾವತ್ತೂ ಸಾಧ್ಯವಾಗುತ್ತಿಲ್ಲ!

★★★

ಹದಿಹರೆಯದ ತರುಣನೋರ್ವನ ತಾಯಿ ಡಾಕ್ಟರ್‌ಗೆ ಫೋನಾಯಿಸಿ ತಿಳಿಸಿದಳು, 'ನನ್ನ ಮಗನಿಗೆ ಜ್ವರ ಬಂದಿದೆಯೆಂದನಿಸುತ್ತದೆ. ಏಕೆಂದರೆ ಇಂದಿನ ದಿನ ಪೂರ್ತಿ ಆತ ತನ್ನ ಬೈಕ್ ಹೊರ ತೆಗೆಯಲಿಲ್ಲ.

ಡಾಕ್ಟರ್: ನಿಮ್ಮ ಮನೆಯಲ್ಲಿ ಥರ್ಮಾಮೀಟರ್ ಇದೆಯೆ?

ತಾಯಿ: ಇಲ್ಲ. ಹೀರೋ ಹೋಂಡಾ ಇದೆ!

**(ಸಂಗ್ರಹ) ರಮಣ್‌ಶೆಟ್ಟಿ ರೆಂಜಾಳ್, ಮುಂಬೈ**


## ಎಂಎಸ್‌ಐಎಲ್ ಚಿಟ್ ಫಂಡ್
# ಉಜ್ವಲ ಪ್ರಗತಿಗೆ ಸುಭದ್ರ ಮಾರ್ಗೋಪಾಯ

**ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ (MSIL)**, ಇದು ಸರ್ಕಾರಿ ಸ್ವಾಮ್ಯದ ವಾಣಿಜ್ಯ ಸಂಸ್ಥೆಯಾಗಿ 1966 ರಲ್ಲಿ ಸ್ಥಾಪನೆಯಾಯಿತು. ಎಂಎಸ್‌ಐಎಲ್ ವಾಣಿಜ್ಯ ಸಂಸ್ಥೆಯಾಗಿ ಕಳೆದ ಐದು ದಶಕಗಳಿಂದ ಹಲವಾರು ವೈವಿಧ್ಯಮಯ ವ್ಯವಹಾರಗಳನ್ನು ಹೊಂದಿದೆ. ವಿದ್ಯಾರ್ಥಿಗಳಿಗೆ ನೋಟ್ ಪುಸ್ತಕಗಳು ಮತ್ತು ಶಾಲಾ ಸಾಮಗ್ರಿಗಳನ್ನು ಒದಗಿಸಿ ಹೆಗ್ಗಳಿಕೆಗೆ ಪಾತ್ರವಾಗಿದೆ. ಇದರೊಂದಿಗೆ ಕೈಗಾರಿಕೋತ್ಪನ್ನ ವಸ್ತುಗಳಾದ ಸೋಲಾರ್ ವಾಟರ್ ಹೀಟರ್ ಮತ್ತು ವಾಟರ್ ಪ್ಯೂರಿಫೈಯರ್‌ಗಳನ್ನು ಮಾರುಕಟ್ಟೆಗೆ ಪರಿಚಯಿಸಿ ಉತ್ತಮವಾಗಿ ಮಾರಾಟ ಮಾಡಲಾಗುತ್ತಿದೆ. ಟೂರ್ ಪ್ಯಾಕೇಜ್‌ಗಳ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ಸಂಸ್ಥೆಯು ಚಿಲ್ಲರೆ ಮದ್ಯ ಮಾರಾಟದ ಮಳಿಗೆಗಳನ್ನು ಹೊಂದಿದ್ದು ಗ್ರಾಹಕರಿಗೆ ಎಂ.ಆರ್.ಪಿ ದರದಲ್ಲಿ ಮಾರಟ ಮಾಡಲಾಗುತ್ತಿದೆ. ಸಾಮಾನ್ಯ ಜನರಲ್ಲಿ ಹೂಡಿಕೆಯ ಮನೋಭಾವನೆಯನ್ನು ವೃದ್ಧಿಪಡಿಸುವ ಹಿನ್ನೆಲೆಯಲ್ಲಿ ರಾಜ್ಯಾದ್ಯಂತ ಚಿಟ್ ಫಂಡ್ಸ್ ಶಾಖಾ ಕಚೇರಿಗಳನ್ನು ಹೊಂದಿದೆ. ಗ್ರಾಹಕರಿಗೆ ಅತ್ಯುತ್ತಮ ಸೇವೆಯನ್ನು ಒದಗಿಸುತ್ತ ಸಾರ್ವಜನಿಕ ರಂಗದಲ್ಲಿ ಹೆಗ್ಗಳಿಕೆಗೆ ಪಾತ್ರವಾಗಿರುವ ಪ್ರಮುಖ ಸರ್ಕಾರಿ ಸ್ವಾಮ್ಯದ ಸಂಸ್ಥೆಯಾಗಿದೆ.

ಎಂಎಸ್‌ಐಎಲ್ ಸಂಸ್ಥೆಯು ಮಧ್ಯಮ ವರ್ಗದ ಜನರನ್ನು ಆಕರ್ಷಿಸಿ ಹೂಡಿಕೆಯ ಮನೋಭಾವ ಬೆಳೆಸುವ ದೃಷ್ಟಿಯಿಂದ ಚಿಟ್ ಫಂಡ್ಸ್ ವಿಭಾಗವನ್ನು ಆರಂಭಿಸಿದ್ದು, ಈಗಾಗಲೇ 22 ಚಿಟ್ ಫಂಡ್ಸ್ ಶಾಖೆಗಳನ್ನು ಹೊಂದಿದೆ ಹಾಗೂ ಇನ್ನೆರಡು ನೂತನ ಶಾಖಾ ಕಛೇರಿಗಳನ್ನು ಕೋಲಾರ ಮತ್ತು ಚಿಕ್ಕಬಳ್ಳಾಪುರದಲ್ಲಿ ಆರಂಭಿಸಿದೆ. ಪಾರದರ್ಶಕತೆಗೆ ಹೆಸರುವಾಸಿಯಾಗಿರುವ ಸಂಸ್ಥೆಯಾಗಿ ಪ್ರಸ್ತುತ ಸುಮಾರು 25,000 ದಷ್ಟು ಸದಸ್ಯತ್ವವನ್ನು ಹೊಂದಿದ್ದು ಸುಮಾರು 214 ಕೋಟಿ ರೂ ಗಳಷ್ಟು ವಾರ್ಷಿಕ ಚಿಟ್ ವ್ಯವಹಾರ ವಹಿವಾಟನ್ನು ಹೊಂದಿದೆ. ಪ್ರತಿಯೊಂದು ಚೀಟಿಯ ಗುಂಪುಗಳಲ್ಲಿ ರೂ. 50 ಸಾವಿರದಿಂದ ಪ್ರಾರಂಭವಾಗಿ ರೂ. 50 ಲಕ್ಷದವರೆಗೆ ಚೀಟಿಯ ಮೊತ್ತವನ್ನು ಹೊಂದಿದ್ದು, ಎಲ್ಲ ವರ್ಗದ ಜನರ ಬೇಡಿಕಗೆ ಅನುಗುಣವಾಗಿ ಚೀಟಿಯ ಗುಂಪನ್ನು ರೂಪಿಸಲಾಗಿದೆ. ಇದರೊಂದಿಗೆ ದೀರ್ಘಾವಧಿ ಚೀಟಿ ಗುಂಪುಗಳನ್ನು ಸಹ ಹೊಂದಿದ್ದು ಮಾಸಿಕ ಕಂತು ರೂ. 1,000/– ದಿಂದ ರೂ. 25,000/– ವರೆಗೆ ಮತ್ತು ಚೀಟಿಯ ಮೊತ್ತ 1 ಲಕ್ಷದಿಂದ 25 ಲಕ್ಷದವರೆಗೆ ಇರುತ್ತದೆ. ಈ ಗುಂಪಿನ ಚೀಟಿಗಳ ಮರುಪಾವತಿ ಅವಧಿಯು 100 ತಿಂಗಳಿದ್ದು (8 ವರ್ಷ 4 ತಿಂಗಳು) ಚಂದಾದಾರರು ಹಣ ಮರುಪಾವತಿಸಲು ಅನುಕೂಲ ಹಾಗು ಸಹಕಾರಿಯಾಗಿರುತ್ತದೆ. ಸಂಸ್ಥೆಯ ಚೀಟಿಯ ಸದಸ್ಯತ್ವ ಪಡೆಯಲು ಅಥವಾ ನೋಂದಾಯಿಸಲು ಯಾವುದೇ ರೀತಿಯ ಅರ್ಜಿ ಸಲ್ಲಿಕೆಯ ಶುಲ್ಕವಿರುವುದಿಲ್ಲ. ಪ್ರತಿಯೊಂದು ಚಿಟ್‌ನ ಲಾಭಾಂಶ ಗಳಿಕೆಯು 2ನೇ ಕಂತಿನಿಂದ ಪ್ರಾರಂಭವಾಗಿ ಬಹುಮಾನಿತ ಮತ್ತು ಬಹುಮಾನಿತರಲ್ಲದ ಎಲ್ಲ ಚಂದಾದಾರರೂ ಸಹ ಸದರಿ ಲಾಭಾಂಶವನ್ನು ಪಡೆಯಲು ಅರ್ಹರಾಗಿರುತ್ತಾರೆ.

ಇಂದಿನ ಹಣಕಾಸಿನ ಮಾರುಕಟ್ಟೆಯು ಅನಿಶ್ಚಿತತೆಯಿಂದ ಕೂಡಿದ್ದು, ಗ್ರಾಹಕರು ಸಂಪೂರ್ಣವಾಗಿ ಗೊಂದಲದಲ್ಲಿರುವ ಪ್ರಸಕ್ತ ಸನ್ನಿವೇಶದಲ್ಲಿ ಇತರೇ ಮಾರುಕಟ್ಟೆಗೆ ಹೋಲಿಸಿದರೆ ಎಂಎಸ್‌ಐಎಲ್ ಚಿಟ್‌ನ ಹೂಡಿಕೆಯಲ್ಲಿ ಹೆಚ್ಚು ಲಾಭಾಂಶ ನೀಡುವ ಯೋಜನೆಯಾಗಿ ಜನಪ್ರಿಯವಾಗಿದೆ. ಕೌಟುಂಬಿಕ ದೀರ್ಘಾವಧಿ ಹಣಕಾಸಿನ ಅಗತ್ಯಗಳನ್ನು ಪೂರೈಸಲು ವೈಯಕ್ತಿಕ ಸಾಲ ತೆಗೆದುಕೊಳ್ಳುವವರಿಗೆ ಬಹಳಷ್ಟು ಅನುಕೂಲವಾಗಿದ್ದು, ಒಳ್ಳೆಯ ಪರ್ಯಾಯ ಹಣಕಾಸಿನ ಯೋಜನೆಯಾಗಿದೆ. ಎಂಎಸ್‌ಐಎಲ್ ಸಂಪೂರ್ಣವಾಗಿ ಸರ್ಕಾರಿ ಸ್ವಾಮ್ಯಕ್ಕೆ ಒಳಪಟ್ಟಿದ್ದು, ಚಿಟ್ಸ್‌ನಲ್ಲಿ ಹಣ ತೊಡಗಿಸುವ ಪ್ರತಿಯೊಬ್ಬ ಗ್ರಾಹಕರಿಗೂ ಸೂಕ್ತ ಭದ್ರತೆ ಒದಗಿಸುವ ಸಲುವಾಗಿ ಸರ್ಕಾರಿ ಚಿಟ್ ಫಂಡ್ಸ್ ವ್ಯವಹಾರವನ್ನು ಕಟ್ಟುನಿಟ್ಟಾಗಿ ಪಾರದರ್ಶಕತೆಯಿಂದ ಪಾಲಿಸಲಾಗುತ್ತಿದೆ. ಸಂಸ್ಥೆಯಲ್ಲಿನ ಚಿಟ್ ಫಂಡ್ಸ್ ಚಟುವಟಿಕೆ ಮತ್ತು ನಿಯಮಗಳ ಪರಿಪಾಲನೆ ಮತ್ತು ನಿಯಂತ್ರಣಕ್ಕಾಗಿ ರಾಜ್ಯ ಸರ್ಕಾರವು ಸಹಕಾರ ಸಂಘಗಳ ಅಪರ ನಿಬಂಧಕರನ್ನು ನಿಯೋಜಿಸಿದ್ದು ಸದರಿ ಅಧಿಕಾರಿಗಳ ಸಲಹೆ–ಸೂಚನೆಗಳ ಅನ್ವಯ ಅಗತ್ಯ ಕ್ರಮಗಳನ್ನು ಅಳವಡಿಸಿಕೊಂಡು ಯಶಸ್ವಿಯಾಗಿ ನಿರ್ವಹಿಸಲಾಗುತ್ತಿದೆ.

ಸಂಸ್ಥೆಯ ಹೂಡಿಕೆದಾರರ ಹಣಕ್ಕೆ ಸೂಕ್ತ ಭದ್ರತೆಯನ್ನು ನೀಡುವುದರ ಜೊತೆಗೆ ಗ್ರಾಹಕರನ್ನು ಉತ್ತೇಜಿಸುವ ಸಲುವಾಗಿ ಹಲವಾರು ಆಕರ್ಷಕ ಬಹುಮಾನ ಯೋಜನೆಗಳನ್ನು ಅಳವಡಿಸಿದೆ. ಪ್ರಸಕ್ತ ವರ್ಷದಲ್ಲಿ ಚಿಟ್ ಫಂಡ್ಸ್ ವಿಭಾಗವು ಸುಮಾರು 214 ಕೋಟಿ ರೂ ಗಳಷ್ಟು ವ್ಯವಹಾರದ ವಹಿವಾಟನ್ನು ಹೊಂದಿದ್ದು, ರಾಜ್ಯದಲ್ಲೇ ಅತ್ಯುತ್ತಮ ಚಿಟ್ ಫಂಡ್ಸ್ ಸಂಸ್ಥೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿ ಅಭಿವೃದ್ಧಿ ಪಥದತ್ತ ದಾಪುಗಾಲು ಇಡುತ್ತಿದೆ. ಸಂಸ್ಥೆಯು 2016–17ನೇ ಸಾಲಿನಲ್ಲಿ 233 ಕೋಟಿ ರೂ. ವಹಿವಾಟನ್ನು ಸಾಧಿಸುವ ಗುರಿಯನ್ನು ಯಶಸ್ವಿಯಾಗಿ ಪೂರೈಸಿದ್ದು. 2017–18ನೇ ಸಾಲಿನಲ್ಲಿ 238 ಕೋಟಿ ರೂ. ವಹಿವಾಟನ್ನು ಪೂರೈಸುವ ಗುರಿ ಹೊಂದಿದೆ. ಈ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಿದ್ದು ಪ್ರಸ್ತುತ ಸೆಪ್ಟಂಬರ್ 2017 ಕ್ಕೆ ರೂ. 115 ಕೋಟಿ ವಹಿವಾಟನ್ನು ನಡೆಸಿದ್ದು, ಮುಂದಿನ ದಿನಗಳಲ್ಲಿ ನಮ್ಮ ಗುರಿಯನ್ನು ಸಾಧಿಸುವತ್ತ ಸಂಸ್ಥೆ ದಾಪುಗಾಲನ್ನಿರಿಸಿದೆ.

MSIL ಚಿಟ್ಸ್

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ:
**ಎಂಎಸ್‌ಐಎಲ್**
ಚಿಟ್ ಫಂಡ್ಸ್ ವಿಭಾಗ, 5ನೇ ಮಹಡಿ, 36 ಕನ್ನಿಂಗ್‌ಹ್ಯಾಂ ರಸ್ತೆ,
ಬೆಂಗಳೂರು - 560 052
ದೂ.: 080-22264021-25
ಇ-ಮೇಲ್: msil.chitfund@msilonline.com
ವೆಬ್‌ಸೈಟ್: www.msilchits.com